ಆಷ್ಟಗ್ರಾಮ ಡಿವೀಜ೯.

ತಾರೀಖು 31ನೇ ಮೇ 1876.

ಚಾಮರಾಜನಗರ ತಾಲ್ಲೂಕು ಮೇಸ್ತ್ರಿ ವೆಂಕಟಸಾಮಿ ಮೊದಲ್ಯಾರ್ಗೆ ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ, ಸದರೀಯವರು ಕಳೆದ ಏಪ್ರೆಲ್ 20ರ ಲಾಗಾಯಿತು ಉಪಯೋಗಿಸಿಕ್ಕೊಂಡು ಇರುತ್ತಾರೆ.

P. N. KRISHNA MURTI,
For Commr.

ನಗರ ಡಿವಿಜ೯.

ನಂ. 5. ತಾರೀಖು 22ನೇ ಮೇ1876.

ಕಡೂರು ಡಿಸ್ಟ್ರಿಕ್ಟು ಮುರಮ್ಮತ್ತು ಮುತ್ಸದ್ದಿ ಚಲುವೈಯಂಗಾರ್ರಿಗೆ ಕೊಡಲ್ಪಟ್ಟ ಪೊಂದು ತಿಂಗಳ ಪ್ರಿವಿಲೀಜ್ ರಜಾ ಬಗರ್ ಅಲ್ಲೌನ್ಸ್ ರಜಾಕ್ಕೆ ಬದಲಾಯಿಸಿರುತ್ತೆ.

ನಂ. 6. ತಾರೀಖು 29ನೇ ಮೇ 1876.

ಷಿಕಾರೀಪುರ ಆಫ್ಟಿಂಗ್ ಮುರಮ್ಮತ್ತು ಮುತ್ಸದ್ದಿ ಕೇಶವೈಯನವರಿಗೆ ಬಗರ್ ಅಲ್ಲೌನ್ಸ್ 15 ದಿನಗಳ ರಜಾ ಜಾಸ್ತೀಯಾಗಿ ಕೊಡಲ್ಪಟ್ಟಿರುತ್ತೆ. ಧರ್ಮರಾಯರು ಅವರ ಕೆಲಸ ಆಫ್ಟಿಂಗ್ ನೋಡುತ್ತಾ ಯಿರತಕ್ಕದ್ದು.

ನಂ. 7. ತಾರೀಖು 29ನೇ ಮೇ 1876.

ಚನ್ನಗಿರಿ ತಾಲ್ಲೂಕು ಮುರಮ್ಮತ್ತು ಮುತ್ಸದ್ದಿ ರಾಮುಪ್ಪನವರಿಗೆ ಬಗರ್ ಅಲ್ಲೌನ್ಸ್ 3 ತಿಂಗಳ ರಜಾ ಕೊಡಲ್ಪಟ್ಟಿರುತ್ತೆ. ಹೊಳಲೂರು ಕೊತ್ವಾಲ್ ಕೃಷ್ಣರಾಯರು ಅವರಿಗೆ ಬದಲಿಯಾಗಿ ಕೆಲಸ ನೋಡುವದಕ್ಕೆ ಮೊಕರರ್.

C. SOOB RAO,
For Commr.

BANGALORE DISTRICT.

Notice regarding an application of Shamaiya for a certificate under Act XXVII of 1860.

ಬೆಂಗಳೂರು ಡಿಸ್ಟ್ರಿಕ್ಟು ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸ೯ 1876ನೇ ಇಸವಿ ಸಿವಿಲ್ ಮಿಸಲೇನಿಯಸ್ ನಂಬರ್ 40.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ:—ಮಾಗಡೀ ತಾಲ್ಲೂಕುತಿರಮಲೆಯಲ್ಲಿ ಯಿರುವ ಶಾನ್ಭೈಯ್ಯ ನೆಂಬುವನು ತನ್ನ ಮಾವ ಶ್ರೀನಿವಾಸ ರಂಗಾಚಾರಿ ಲೇಣಿ 500 ರೂಪಾಯಿ ಬರವಾಣಿಕ್ಕೊಳ್ಳತಕ್ಕ ಬಗ್ಗೆ ಸ೯ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಕೊಟ್ಟಿರುವ ಅಪ್ಲಿಕೇಷನ್ 1876ನೇ ಇಸವಿ ಜೂ೯ ತಿಂಗಳು 30ನೇ ತಾರೀಖು ದಿವಿ 12 ಘಂಟೆಗೆ ಈ ಕೋರ್ಟಿನಲ್ಲಿ ವಿಚಾರ್ಣೆ ಆಗಲ್ಪಡುತ್ತದಾಗಿ ಆ ಮೊಬಲಗ ಮೇಲೆ ಹಕ್ಕು ವುಳ್ಳವರು ಆ ದಿವಸ ಟೈಮಿಗೆ ಹಾಜರಾಗಿ ತಮ್ಮ ಹಕ್ಕನ್ನು ಸ್ಥಾಪಿಸಿ ಕೊಡಬಹುದು.

ಬತಾರೀಖು 31ನೇ ಮಾಹೆ ಮೇ ಸ೯ 1876ನೇ ಇಸವಿ, ಮೊಕ್ಕಾಂ ಬೆಂಗಳೂರು.

L. RICKETTS,
Offg. Dy. Commr.